Construction of a Bridge Across Cauvery River near Mahadevapura.

*Q.—369. Sri K. S. SURYANARAYANA RAO [On behalf of Sri A. G. BANDIGOWDA (Srirangapatna)] . —

Will the Government be pleased to state.—

(a) the stage at which the scheme to construct a bridge across the Cauvery River near Mahadevapura Village, Kasaba Hobli in Srirangapatna Taluk is pending;

(b) whether they intend to take up the construction work next year or as early as possible;

(c) whether it is not a fact that.

(i) the survey work was finished; and

(ii) the estimate was sanctioned?

A.—Sri VEERENDRA PATIL (Minister for Public Works).—

(a) The Scheme has been deffered for the present.

(b) This will be considered, subject to availability of funds.

(c) (i) Survey work was finished;

(ii) but the estimate has not yet been sanctioned.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಶ್ರೀರಂಗಪಟ್ಟಣ ತಾಲ್ಲೂಕು ಕನಬಾ ಹೋಬಳಿಯಲ್ಲಿರುವ ಮಹದೇವಪುರ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡರಾಗಿ ಸೇತುವೆಯೊಂದನ್ನು ಎಷ್ಟೆಸ ಬೇಕೆಂದು ಎಷ್ಟು ವರ್ಷಗಳಿಂದ ಒತ್ತಾಯ ಮಾಡುತ್ತಿದ್ದಾರೆಂಬುದನ್ನು ಹೇಳುತ್ತೀರಾ?

Sri G. B. SHANKER RAO.—There is a demand for the construction of this bridge since 1961.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಅದರ ಸರ್ವೆ ಆಗಿದ್ದು ಯಾವಾಗ, ಅದರ ಕಾಸ್ಟ್ ಎಷ್ಟು?

Sri G. B. SHANKER RAO.—The cost of the bridge is about 12 lakhs.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ಈ ಸೇತುವೆ ಜಿಲ್ಲಾ ಹೆಡ್‌ಕ್ವಾರ್ಟರಿಗೆ ಹೋಗುವುದಕ್ಕೆ ಬಹಳ ಅಗತ್ಯವಾಗಿದೆ. ಮತ್ತು ಈ ಸೇತುವೆ ಮೂಲಕ ಪಾಂಡವಪುರಕ್ಕೆ ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಸಾಗಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ತೀವ್ರವಾಗಿ ಮಾಡುವುದಕ್ಕೆ ಪರಿಶೀಲಿಸುತ್ತೇವೆಂದು ಹಿಂದೆ ಸರ್ಕಾರದವರು ಆಶ್ವಾಸನೆ ಕೊಟ್ಟಿದ್ದರು. ಆದ್ದರಿಂದ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಗಮನದಲ್ಲಿಟ್ಟುಕೊಳ್ಳುತ್ತೇವೆ.

Supply of Levelling Instruments to the Public Works Department Sub-Divisions in Tumkur District.

*Q.—376 Sri B. BYRAPPAJI (Tururvekere).—

Will the Government be pleased to state.—

(a) whether it is a fact that the Public Works Department Sub-Divisions in Tumkur District are not supplied with required number of levelling instruments;

(SRI B. BYRAPPAJI)

(*b*) if so, how many levelling instruments were supplied to each of the Public Works Department Sub-Divisions in Tumkur District;

(*c*) out of them the number of instruments that are in good condition ?

A.—SRI VEERENDRA PATIL (Minister for Public Works).—

(*a*) No.

(*b*) The number of instruments supplied is as follows :

Name of the Sub-Division		*Nos.*
1 Tumkur Sub-Division	...	8
2 Gubbi Sub-Division	...	9
3 Tiptur Sub-Division	...	9
4 Turuvekere Sub-Division	...	5
5 Kunigal Sub-Division	...	4
6 Mangala Project Sub-Division	...	4
7 Sira Sub-Division	...	7
8 Madhugiri Sub-Division	...	7
9 Koratagere Sub-Division	...	4
10 Pavagada Sub-Division	...	3
11 Chicknaikanahally Sub-Division	...	6
Total	...	66

(*c*) 49 Nos.

ಶ್ರೀ ಜಿ. ಬೈರಪ್ಪಾಜಿ.—ಸ್ವಾಮಿ, ತುಮಕೂರು ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ಸಬ್‌ಡಿವಿಜನ್‌ಗಳಿಗೆ ಅವಶ್ಯಕವಿರುವಷ್ಟು ಲೆವೆಲಿಂಗ್ ಉಪಕರಣವನ್ನು ಒದಗಿಸಿಲ್ಲದಿರುವುದು ನಿಜವಲ್ಲವೇ ಎಂದು ಕೇಳಿದ್ದಕ್ಕೆ ಅದು ನಿಜವಲ್ಲ ಎಂದು ಹೇಳಿದ್ದೀರಿ, ಅಲ್ಲಿನ ಸಬ್‌ಡಿವಿಜನ್‌ಗಳಿಗೆ ಅನೇಕ ಉಪಕರಣಗಳನ್ನು ಕೊಟ್ಟಿಲ್ಲ, ಅಲ್ಲಿ ಈಗ ಹಾಲಿ ಇರತಕ್ಕ ಅನೇಕ ಉಪಕರಣಗಳು ಬಹಳ ದಿವಸಗಳಿಂದ ಕೆಟ್ಟು ಹೋಗಿವೆ. ಆದ್ದರಿಂದ ಅವುಗಳಿಗೆ ರಿಪೇರಿ ಮಾಡಿಸುವಂತಹ ಪ್ರಾಮುಖ್ಯತೆ ಇರುವುದು ನಿಜವಲ್ಲವೇ ? ಮತ್ತು ಆ ಉಪಕರಣಗಳಿಗೆ ತೊಂದರೆ ಇದೆಯೆಂದು ಅವರು ಯಾವಾಗಲೂ ಸರ್ಕಾರದವರನ್ನು ಕೇಳಿಲ್ಲವೇ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಹೇಳಿದಹಾಗೆ ಆ ಉಪಕರಣಗಳು ಅನೇಕ ದಿವಸಗಳಿಂದ ಕೆಟ್ಟುಹೋಗಿಲ್ಲ. ತುಮಕೂರು ಜಿಲ್ಲೆಯಲ್ಲಿರತಕ್ಕ ಲೋಕೋಪಯೋಗಿ ಸಬ್‌ಡಿವಿಜನ್‌ಗಳಲ್ಲಿರುವ 66 ಇನ್ಸ್ಟ್ರುಮೆಂಟ್‌ಗಳ ಪೈಕಿ 17 ಮಾತ್ರವಾ ದುರಸ್ತಾಗಿವೆ. ಸರಿಪಡಿಸುವುದಕ್ಕಾಗಿ ಜನವರಿ ತಿಂಗಳಲ್ಲಿ ಅವುಗಳನ್ನು ಬೆಂಗಳೂರಿಗೆ ತರಿಸಿಕೊಂಡಿದೆ.

ಶ್ರೀ ಬಿ. ಬೈರಾಪ್ಪಾಜಿ.—ಒಬ್ಬ ಸೂಪರ್‌ವೈಜರಿಗೆ ಒಂದು ಲೆವೆಲಿಂಗ್ ಇನ್ಸ್ಟ್ರುಮೆಂಟ್ ಕೊಡಬೇಕೆಂಬ ನಿಯಮ ಇಲ್ಲವೇ ?

ಶ್ರೀ ಜಿ. ಬಿ. ಶಂಕರರಾವ್.—ಆ ತರಹ ನಿಯಮವೇನೂ ಇಲ್ಲ. ಅಲ್ಲಿನ ವರ್ಕ್‌ಲೋಡನ್ನು ನೋಡಿಕೊಂಡು ಅವರಿಗೆ ಇನ್ಸ್ಟ್ರುಮೆಂಟ್ ಕೊಡುತ್ತೇವೆ.

ಶ್ರೀ ಜೆ. ಬಿ. ಬೈರಪ್ಪಾಜಿ.—ಈಗ ಕೆಟ್ಟುಹೋಗಿರತಕ್ಕ ಉಪಕರಣಗಳನ್ನು ಅದಷ್ಟು ಜಾಗ್ರತೆ ರಿಪೇರಿ ಮಾಡಿಸುವುದಕ್ಕೆ ಸರ್ಕಾರದವರು ಅವಶ್ಯಕವಾದ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಆ ಬಗ್ಗೆ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ.